ಇಳಿಯಬೇಕಾಗಿದ್ದರೆ, ಅಂಥ ಹೋರಾಟ ಮಾಡೋಣ ಆ ರೀತಿಯಾಗಿ ಮಾಡೋಣ ಎಂದು ಹೇಳಿ ಬಹುಶ: ರಾಜ್ಯದ ಜನತೆ, ಬಹುಶ: ನಮ್ಮ ವಾಟಾಳ್ ನಾಗರಾಜ್ ಅವರು ಹೇಳಿದರು. ಉತ್ತರ ಕರ್ನಾಟಕದವರು ಬೆಂಬಲ ನೀಡಿದರು ಎಂದು ಹೇಳಿದರು. ಇಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಪ್ರಶ್ನೆ ಅಲ್ಲ. ಇಲ್ಲಿ ಬಹುಶ: ಇರುವುದು ಕರ್ನಾಟಕದ ನಮ್ಮೆಲ್ಲ ರೈತರ ಸಮಸ್ಯೆ. ಬರೇ ಒಂದು ಕಾವೇರಿಯದಷ್ಟೇ ಅಲ್ಲ ಸಮಸ್ಯೆ. ಬಹಳ ಗೊಂದಲದಲ್ಲಿದ್ದೇವೆ. ಒಂದು ಕಡೆ ತುಂಗಭದ್ರಾ. ಇನ್ನೊಂದು ಕಡೆ ಕೃಷ್ಣಾ, ಮಲಪ್ರಭಾ, ಮಹದಾಯಿ. ಯಾವುದನ್ನೂ ಸರಳವಾಗಿ ಮಾಡಲು ನಮಗೆ ಬಿಡುತ್ತಿಲ್ಲ. ಎಲ್ಲಾ ಸಂಪತ್ತು ಇದ್ದಂತಹ ರಾಜ್ಯ ಇದು. ಆದರೆ ದುರ್ದೈವದಿಂದ ಅದನ್ನು ಬಳಕೆ ಮಾಡಿ ನಾವು ಉಣ್ಣುತ್ತೇವೆ ಎಂದರೆ ಅದನ್ನು ಉಣ್ಣುಗೊಡದ ಸ್ಥಿತಿ ನಮ್ಮ ಸುತ್ತಲಿನ ರಾಜ್ಯಗಳಿಂದ ಆಗುತ್ತಿದೆ. ಸುತ್ತಲಿನ ರಾಜ್ಯಗಳು ಬಹಳ ತೊಂದರೆ ಕೊಡುತ್ತಿವೆ. ಆ ಕಾರಣದಿಂದ ನಾವೆಲ್ಲರೂ ಹೋರಾಟ ಮಾಡಿ, ಇದಕ್ಕೆ ನ್ಯಾಯ ದೊರಕಿಸುವಂತಹ ಪ್ರಯತ್ನ ಮಾಡೋಣ ಎಂದು ಹೇಳಿ ತಮಗೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2. ಮಂತ್ರಿಗಳ ಹೇಳಿಕೆ :

ವಿಷಯ : ಕೊಬ್ಬರಿಗೆ ನೀಡುತ್ತಿರುವ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸುವ ಬಗ್ಗೆ ಹೇಳಿಕೆ.

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲಸಚಿವರು): ಮಾನ್ಯ ಅಧ್ಯಕ್ಷರೆ, ಈಗ ತಾನೇ ಮಾನ್ಯ ಮಾಧುಸ್ವಾಮಿಯವರು ಈ ಬೆಂಬಲ ಬೆಲೆಯ ಆಧಾರದ ಮೇಲೆ Nafed ಕೊಳ್ಳುತ್ತಿದ್ದ ಕೊಬ್ಬರಿಯ ಮೇಲೆ ರಾಜ್ಯ ಸರ್ಕಾರ ನೀಡುತ್ತಿರುವ ಪ್ರತಿ ಕ್ವಿಂಟಾಲ್‌ಗೆ 600 ರೂಪಾಯಿ ಸಬ್ಸಿಡಿ ಯೋಜನೆ ಇಂದಿಗೆ ಮುಗಿಯುವುದೆಂಬ ಆಧಾರದ ಮೇಲೆ ತುಂಬಾ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟಿಗೆ ಬರುತ್ತಿದೆ. ಬಹಳ ಗಂಭೀರವಾದ ಪರಿಸ್ಥಿತಿಯಾಗಿದೆ ಎಂದು ಸಹ ಹೇಳಿದ್ದಾರೆ. ಈ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸಬೇಕೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಮುಂದಿನ ಅಂಶವನ್ನು ಗಮನಿಸಿ ಸಂಬಂಧಪಟ್ಟ ಮಂತ್ರಿಗಳು, ಉಪ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಮುಂದಿನ ತೀರ್ಮಾನವನ್ನು ತಿಳಿಸುತ್ತೇವೆ.